# ಪ್ರಾರ್ಥನೆ

# ಪರಾಪೂಜಾ

**ಪೂರ್ಣಸ್ಯಾವಾಹನಂ ಕುತ್ರ ಸರ್ವಾಧಾರಸ್ಯ ಚಾಸನಮ್ ।**
**ಸ್ವಚ್ಛಸ್ಯ ಪಾದಮರ್ಘ್ಯಂ ಚ ಶುದ್ಧಸ್ಯಾಚಮನಂ ಕುತಃ ॥ ೧ ॥**

ಪೂರ್ಣಪೂರ್ಣನಾಗಿರುವವನನ್ನು ಆವಾಹನೆ ಮಾಡುವುದೆಲ್ಲಿ? ಸರ್ವಕ್ಕೂ ಆಧಾರಭೂತನಾಗಿರುವವನಿಗೆ ಆಸನವನ್ನು ಹಾಕುವುದೆಲ್ಲಿ? ಸ್ವಚ್ಛನಾಗಿರುವವನಿಗೆ ಪಾದ್ಯವನ್ನು ಮತ್ತು ಅರ್ಘ್ಯವನ್ನು ಕೊಡುವುದು ಹೇಗೆ? ಶುದ್ಧನಾಗಿರುವವನಿಗೆ ಆಚಮನವನ್ನು ನೀಡುವುದು ಹೇಗೆ?

**ನಿರ್ಮಲಸ್ಯ ಕುತಃ ಸ್ನಾನಂ ವಸ್ತ್ರಂ ವಿಶ್ವೋದರಸ್ಯ ಚ ।**
**ನಿರಾಲಂಬಸ್ಯೋಪವೀತಂ ಪುಷ್ಪಂ ನಿರ್ವಾಸನಸ್ಯ ಚ ॥ ೨ ॥**

ನಿರ್ಮಲನಾದವನಿಗೆ ಸ್ನಾನವೆಲ್ಲಿಯದು? ವಿಶ್ವವನ್ನೇ ಉದರದಲ್ಲಿ ಧರಿಸಿರುವವನಿಗೆ ವಸ್ತ್ರವೆಲ್ಲಿಯದು? ನಿರಾಲಂಬನಾದವನಿಗೆ ಉಪವೀತದಿಂದೇನು? ನಿರ್ಗಂಧನಾದವನಿಗೆ ಪುಷ್ಪದಿಂದೇನು?

**ನಿರ್ಲೇಪಸ್ಯ ಕುತೋ ಗಂಧೋ ರಮ್ಯಸ್ಯಾಭರಣಂ ಕುತಃ ।**
**ನಿತ್ಯತೃಪ್ತಸ್ಯ ನೈವೇದ್ಯಸ್ತಾಂಬೂಲಂ ಚ ಕುತೋ ವಿಭೋ ॥ ೩ ॥**

ನಿರ್ಲೇಪನಾಗಿರುವವನಿಗೆ ಗಂಧವನ್ನು ಲೇಪಿಸುವುದೆಂತು? ಯಾರು ಸೌಂದರ್ಯವೇ ಆಗಿರುವನೋ ಅವನಿಗೆ ಆಭರಣದಿಂದೇನು ಪ್ರಯೋಜನ? ನಿತ್ಯತೃಪ್ತನಾದ ವಿಭುವಿಗೆ ನೈವೇದ್ಯ — ತಾಂಬೂಲಗಳನ್ನು ಕೊಡುವುದು ಹೇಗೆ?

**ಪ್ರದಕ್ಷಿಣಾ ಹ್ಯನಂತಸ್ಯ ಹ್ಯದ್ವಯಸ್ಯ ಕುತೋ ನತಿಃ ।**
**ವೇದವಾಕ್ಯೈರವೇದ್ಯಸ್ಯ ಕುತಃ ಸ್ತೋತ್ರಂ ವಿಧೀಯತೇ ॥ ೪ ॥**

ಅನಂತನಾಗಿರುವವನನ್ನು ಪ್ರದಕ್ಷಿಣೆ ಮಾಡುವುದು ಹೇಗೆ? ಅದ್ವಯನಿಗೆ ನಮಸ್ಕರಿಸುವುದು ಹೇಗೆ? ವೇದವಾಕ್ಯಗಳಿಂದಲೂ ಯಾವನನ್ನು ತಿಳಿಯಲಾಗದೋ ಅವನನ್ನು ಸ್ತುತಿಸುವುದು ಹೇಗೆ?

**ಸ್ವಯಂಪ್ರಕಾಶಮಾನಸ್ಯ ಕುತೋ ನೀರಾಜನಂ ವಿಭೋಃ ।**
**ಅಂತರ್ಬಹಿಶ್ಚ ಪೂರ್ಣಸ್ಯ ಕಥಮ್ ಉದ್ವಾಸನಂ ಭವೇತ್ ॥ ೫ ॥**

ಸ್ವಯಂಪ್ರಕಾಶನಾದವನಿಗೆ ಮಂಗಳಾರತಿ ಎತ್ತುವುದು ಹೇಗೆ? ಒಳಗೆ ಹೊರಗೆ ಪೂರ್ಣನಾಗಿರುವವನನ್ನು ಬೀಳ್ಕೊಡುವುದು ಹೇಗೆ?

**ಏವಮೇವ ಪರಾಪೂಜಾ ಸರ್ವಾವಸ್ಥಾಸು ಸರ್ವದಾ ।**
**ಏಕಬುದ್ಧ್ಯಾ ತು ದೇವೇಶೇ ವಿಧೇಯಾ ಬ್ರಹ್ಮವಿತ್ತಮೈಃ ॥ ೬ ॥**

ಈ ಪ್ರಕಾರ ಸರ್ವದಾ ಎಲ್ಲ ಅವಸ್ಥೆಗಳಲ್ಲೂ ಶ್ರೇಷ್ಠರಾದ ಬ್ರಹ್ಮಜ್ಞಾನಿಗಳು ಏಕಬುದ್ಧಿಯಿಂದ ದೇವೇಶನಲ್ಲಿ ಪರಾಪೂಜೆಯನ್ನು ಮಾಡಬೇಕು.

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ

ನಿನ್ನ ಸಾಧನೆ, ಮಾತು ಹಾಗೂ ನಡತೆ ಇವುಗಳಲ್ಲಿ ಪ್ರಾಮಾಣಿಕನಾಗಿರು. ಇದರಿಂದ ನೀನು ಧನ್ಯನಾಗುವೆ! ಜಗತ್ತಿನಲ್ಲಿರುವ ಎಲ್ಲ ಜೀವಿಗಳ ಮೇಲೂ ಭಗವಂತನ ಅನುಗ್ರಹ ಸದಾ ಹರಿದು ಬರುತ್ತಿರುವುದು. ಅದಕ್ಕಾಗಿ ಕೇಳಬೇಕಾಗಿಲ್ಲ.

— ಶ್ರೀ ಶಾರದಾದೇವಿ

ನಾನು ನಿಮ್ಮ ಮುಂದೆ ಒಂದು ಭಾವನಾಮೂರ್ತಿಯನ್ನು ಪ್ರತಿಷ್ಠಾಪಿಸುತ್ತೇನೆ, ಅದು ನಿಮ್ಮ ಜೀವನದ ಉಸಿರಾಗಬೇಕು — ಅದೇ 'ರಾಷ್ಟ್ರೀಯತೆ.' ಭಾರತದಲ್ಲಿ ಏಕತೆ ಇಲ್ಲದಿರುತ್ತಿದ್ದರೆ ಅದಕ್ಕೆ ಏಕತೆಯನ್ನು ಯಾವ ರೀತಿಯಲ್ಲಿಯೂ ನೀಡಲಾಗುವುದಿಲ್ಲ.

— ಸೋದರಿ ನಿವೇದಿತಾ

ಒಬ್ಬ ವ್ಯಕ್ತಿಯ ಎದೆ ಒಡೆಯುವುದನ್ನು ನಿಲ್ಲಿಸಿದರೂ ನನ್ನ ಬದುಕು ವ್ಯರ್ಥವಾಗದು.

— ಎಮಿಲಿ ಡಿಕೆನ್ಸನ್

ಪ್ರೇಮಭಕ್ತಿಯನ್ನು ಮರೆಯಬೇಡ. ಭವಸಾಗರ ದಾಟಿಸುವ ದೋಣಿಯ ಹಾಯಿ ಬಿಚ್ಚಲು ಬೇಕಾದ ಹುಚ್ಚನ್ನು ಅದು ನೀಡುವುದು.

— ಮೀರಾಬಾಯಿ

ನಮ್ಮಲ್ಲಿ ಎಡೆಬಿಡದ ಪ್ರಯತ್ನವಿರಬೇಕು. ನಮ್ಮಲ್ಲಿ ಆತ್ಮವಿಶ್ವಾಸವಿರಬೇಕು. ಏನೋ ಒಂದನ್ನು ಸಾಧಿಸುವ ಶಕ್ತಿ ನಮ್ಮಲ್ಲಿದೆ ಎಂದು ನಾವು ನಂಬಬೇಕು. ಕೊನೆಗೆ ಅದನ್ನು ನಾವು ಸಾಧಿಸಬೇಕು.

— ಮೇರಿ ಕ್ಯೂರಿ

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿಯ ಅಳೆದು ತೀರದ ಮುನ್ನ
ಶಿವನ ನೆನೆಯಿರೋ! ಶಿವನ ನೆನೆಯಿರೇ !
ಈ ಜನ್ಮ ಬಳಿಕಿಲ್ಲ!

— ಅಕ್ಕಮಹಾದೇವಿ